ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತಮೂರನೆಯ ಅಧಿವೇಶನ
ಮಂಗಳವಾರ, ದಿನಾಂಕ: 2ನೇ ಫೆಬ್ರುವರಿ, 2021

ಮರಳು ನಿಕ್ಷೇಪಗಳ ಬಗ್ಗೆ

ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

173(80) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹಾಸನ ಜಿಲ್ಲೆಯಲ್ಲಿ ಎಷ್ಟು ಮರಳು ನಿಕ್ಷೇಪಗಳನ್ನು ಗುರುತಿಸಲಾಗಿದೆ; ಇವುಗಳಲ್ಲಿ ಎಷ್ಟು ಮರಳು ನಿಕ್ಷೇಪಗಳನ್ನು ಹರಾಜು ಮುಖಾಂತರ ವಿಲೇವಾರಿ ಮಾಡಲಾಗಿದೆ ; ಇವುಗಳನ್ನು ಹರಾಜಿನಲ್ಲಿ ಪಡೆದ ಗುತ್ತಿಗೆದಾರರು ಯಾರು ; (ಕಳೆದ 3 ವರ್ಷಗಳ ನಿಕ್ಷೇಪವಾರು ಮಾಹಿತಿ ನೀಡುವುದು)

(ಆ) ಹಾಸನ ಜಿಲ್ಲೆಯಲ್ಲಿ ಅಕ್ರಮ ಮರಳು ದಾಸ್ತಾನು ಪ್ರಕರಣಗಳು ಬೆಳಕಿಗೆ ಬಂದಿವೆಯೇ ; ಬಂದಿದ್ದಲ್ಲಿ, ಎಷ್ಟು ಪ್ರಮಾಣದ ಮರಳನ್ನು ಅಕ್ರಮವಾಗಿ ಸಂಗ್ರಹಿಸಲಾಗಿತ್ತು ; ಯಾರು ಸಂಗ್ರಹಿಸಿದ್ದಾರೆ ;ಇದಕ್ಕೆ ವಿಧಿಸಿರುವ ದಂಡವೆಷ್ಟು ; (ಕಳೆದ 3 ವರ್ಷಗಳ ಪ್ರಕರಣವಾರು ಮಾಹಿತಿ ನೀಡುವುದು)

(ಇ) ಹಾಸನ ಜಿಲ್ಲೆಯಲ್ಲಿ ಅಕ್ರಮ ಮರಳು ದಾಸ್ತಾನುದಾರರ ವಿರುದ್ಧ ಮತ್ತು ಅಕ್ರಮ ಮರಳು ದಾಸ್ತಾನು ಮಾಡದಂತೆ ತಡೆಯಲು ವಿಫಲರಾಗಿರುವ ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ; ಪ್ರಕರಣವಾರು ಮಾಹಿತಿ ನೀಡುವುದು ; ಅಕ್ರಮ ಮರಳು ದಾಸ್ತಾನು ಮಾಡುವುದನ್ನು ತಡೆಗಟ್ಟಲು ಸರ್ಕಾರವು ವಹಿಸಿರುವ ಮುಂಜಾಗ್ರತಾ ಕ್ರಮಗಳೇನು ? (ವಿವರ ನೀಡುವುದು)